ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೊರಟ್ಟಿಯವರು ಮೇಲ್ಮನೆಯಲ್ಲಿ ಇದ್ದಾರೆ. ಮಾನ್ಯ ಸದಸ್ಯರು ಬಹಳ ಗುರುತರವಾದಂತಹ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ನಾಳೆ ಆ ವಿಚಾರದಲ್ಲಿ ಸರ್ಕಾರದಿಂದ ಉತ್ತರವನ್ನು ಕೊಡಿಸುತ್ತೇನೆ.

(ಇ) ವಿಷಯ: ಗುಲ್ಬರ್ಗಾ ನರ್ಸಿಂಗ್ ಕಾಲೇಜಿನಲ್ಲಿ (ಆದರ್ಶನಗರ) ವ್ಯಾಸಂಗ ಮಾಡುತ್ತಿರುವ 7 ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಹಿಂಸೆ ನೀಡಿರುವ ಬಗ್ಗೆ.

ಶ್ರೀ ಐವಾನ್ ನಿಗ್ಲಿ (ನಾಮ ನಿರ್ದೇಶನ ಹೊಂದಿದವರು): ಸನ್ಮಾನ್ಯ ಉಪಾಧ್ಯಕ್ಷರೆ, I would like to draw the attention of Hon'ble Minister of Medical Education regarding harassment caused to the students by the management of Nursing College in Gulbarga.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ,

ಮಾನ್ಯ ಸದಸ್ಯರು ಗುಲ್ಬರ್ಗಾ ನರ್ಸಿಂಗ್ ಕಾಲೇಜ್ (ಆದರ್ಶನಗರ) ರವರು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 7 ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಅವರಿಗೆ ಹಿಂಸೆ ನೀಡಿದ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ.

ಈ ವಿಷಯದ ಕುರಿತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ವರದಿ ಪಡೆಯಲಾಗಿದ್ದು ಗುಲ್ಬರ್ಗಾ ಕಾಲೇಜ್ ಆಫ್ ನರ್ಸಿಂಗ್ ಎಂಬ ಹೆಸರಿನ ಯಾವುದೇ ಕಾಲೇಜು ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವುದಿಲ್ಲ. ಅದರಂತೆಯೇ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಂದ ಪಡೆದ ವರದಿಯಂತೆ ಗುಲ್ಬರ್ಗಾದಲ್ಲಿ ಆಲ್ ಕರೀಮ್ ನರ್ಸಿಂಗ್ ಕಾಲೇಜ್ ಅಸ್ತಿತ್ವದಲ್ಲಿದ್ದು, ಈ ಕಾಲೇಜಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 398 ಎಂಪಿಎಸ್ 2003, ದಿನಾಂಕ 30.12.2003ರಲ್ಲಿ 60 ವಿದ್ಯಾರ್ಥಿ ಪ್ರವೇಶ ಮಿತಿಯ ಬಿ.ಎಸ್ಸಿ ನರ್ಸಿಂಗ್ ಕೋರ್ಸಿನೊಂದಿಗೆ ಕೆಲವು ಷರತ್ತಿಗೊಳಪಡಿಸಿ 2004–05ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಲಾಗಿದೆ. ಆದರೆ, ಭಾರತೀಯ ಶುಶ್ರೂಷ ಪರಿಷತ್ತಿನವರು ಸದರಿ ಕಾಲೇಜಿಗೆ 20 ಸೀಟುಗಳಿಗೆ ಮಾತ್ರ ಅನುಮತಿ ನೀಡಿರುತ್ತಾರೆ.

ಗುಲ್ಬರ್ಗಾ ನರ್ಸಿಂಗ್ ಕಾಲೇಜು (ಆದರ್ಶನಗರ) ರವರು ವಿದ್ಯಾರ್ಥಿಗಳಿಗೆ ಕೂಡಿ ಹಾಕಿ ಹಿಂಸೆ ನೀಡಿದ್ದಾರೆಂಬ ಆರೋಪದ ಬಗ್ಗೆ

ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಮೂಲಕ ತನಿಖೆಯನ್ನು ನಡೆಸಿ ಒಂದು ವಾರದಲ್ಲಿ ವರದಿಯನ್ನು ಪಡೆದು ಸದರಿ ಆರೋಪ ಮೇಲ್ನೋಟಕ್ಕೆ ನಿಜವಿದೆ ಎಂದು ಕಂಡುಬಂದಲ್ಲಿ ಸದರಿ ಕಾಲೇಜಿನ ಆಡಳಿತ ಮಂಡಳಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಐವಾನ್ ನಿಗ್ಲಿ (ನಾಮ ನಿರ್ದೇಶನ ಹೊಂದಿದವರು): ಮಾನ್ಯ ಉಪಾಧ್ಯಕ್ಷರೆ, ಇದು ಗುಲ್ಬರ್ಗಾ ಜಿಲ್ಲೆಯ ಸಮಸ್ಯೆ ಮಾತ್ರವಲ್ಲ. This is not a district subject, this is a State subject. We have more than 600 nursing schools and 300 nursing colleges in Karnataka State. Today morning also I have received two complaints. One is from Bangalore City College of Nursing. Two students Mr. Francis and Mr. Ajish, two boys. ಅವರು ಏನು ಹೇಳಿದ್ದಾರೆ ಎಂದರೆ, 2003ರಲ್ಲಿ GNM nuringಗೆ ಅಲ್ಲಿ apply ಮಾಡಿ Shekar School of Nursing ನಲ್ಲಿ ಅವರಿಗೆ ದಾಖಲೆ ಮಾಡಿದ್ದಾರೆ. ಆದರೆ ಒಂದೆರಡು ತಿಂಗಳಾದ ಮೇಲೆ ಅವರಿಗೆ ಆ ನರ್ಸಿಂಗ್ ಕಾಲೇಜಿನಿಂದ ಇನ್ನೊಂದು ನರ್ಸಿಂಗ್ ಕಾಲೇಜಿಗೆ ಶಿಫ್ಟ್ ಮಾಡಿದ್ದಾರೆ. ಏಕೆಂದರೆ, ಅಲ್ಲಿರುವ INC ಸೀಟುಗಳ ಸಂಖ್ಯೆ 40–45. I do not have the correct Information for that. INC ಎಷ್ಟು ಜನರಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ನನ್ನ ಬಳಿ correct ಆದ ಮಾಹಿತಿ ಇಲ್ಲ. ಅದೇ ತರಹ ನಿನ್ನೆ ಮಧ್ಯಾಹ್ನ ಇನ್ನೊಂದೆರಡು ಸ್ಕೂಲ್‌ಗಳ ವಿದ್ಯಾರ್ಥಿಗಳಿಂದ ನನಗೆ ದೂರುಗಳು ಬಂದಿವೆ. ಅದನ್ನು ನಾನು ಸನ್ಮಾನ್ಯ ಮಂತ್ರಿಗಳಿಗೆ ಇವತ್ತು ಮಧ್ಯಾಹ್ನ ಕಳುಹಿಸಿಕೊಟ್ಟಿದ್ದೇನೆ. ಅಬ್ದುಲ್ ಸಲಾಂ ಎನ್ನುವವರು ಒಬ್ಬರು ದೂರು ಕೊಟ್ಟಿದ್ದಾರೆ. ಪೀರ್ ಮೊಹಮ್ಮದ್ ಷಾ ಎಂಬ Bangalore City College of Nursing ನಲ್ಲಿ ಓದುತ್ತಿರುವ ಇನ್ನೊಬ್ಬರೂ ಸಹ ಇದೇ ತರಹದ ದೂರು ಕೊಟ್ಟಿದ್ದಾರೆ. You know what is happening? For most Nursing Schools and Nursing Colleges of Karnataka State, we give them the permission i.e., from and KNC Rajiv Gandhi University Affiliation. But when they apply for INC, when we permit them 60 seats, after the INC inspection takes place, it will be reduced to 30-40 seats. That is because of the infrastructure that they are having. But, what happens to the students whom they have admitted for 60 or above that?. ಆ ಮಕ್ಕಳ ಭವಿಷ್ಯ

ಏನಾಗುತ್ತದೆ ಎಂಬುದರ ಬಗ್ಗೆ ತಾವು ಹೇಳಬೇಕು. ಅದು ಮಾತ್ರವಲ್ಲ. ಇದು ಗುಲ್ಬರ್ಗಾದಲ್ಲಿ ಆ concerned Police Stationಗೆ ನಾನು ಫೋನ್ ಮಾಡಿ ಹೇಳಿದೆ. This occurred on 15th June 2006. ಇದು 15ನೇ ತಾರೀಖಿನಲ್ಲಿ ಆಗಿದೆ. ನಾನು ಮೊನ್ನೆ ಎಂ.ಪಿ. ನಗರ ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ಅಲ್ಲಿದ್ದ ಸಬ್ ಇನ್ಸ್‌ಪೆಕ್ಟರ್ ಮೇಡಂ ಸುಧಾರವರೊಂದಿಗೆ ಮಾತನಾಡಿದೆ. I spoke to the Madam also. I told here about this problem. ಅವರು ಏನು ಹೇಳಿದರು ಎಂದರೆ, we have not received any complaint. The reason why they have not received any complaint was, these children were locked; these seven boys were locked up and beaten up. That is too much. Their mobile phones were taken from them and they did not have any opportunity or chance to make a complaint. Finally, what they did was, they wrote a slip and dropped it through the window. Some other boys got that slip and they complained to Kerala. These students are from Kerala. From there, two leading Newspapers, i.e., Malayam Manorama, a National paper and Mathru Bhoomi from Bangalore have published this matter. Why the local papers in Karnataka did not get this complaint? The reason is they did not get the opportunity to go to the police station to complain about it. These things are happening not only in Gulbarga, but this is happening through out Karnataka State. I request the government to form a separate committee for this. Yes, I know that already our Governor has set up a task force for this. But, even then, the law is broken. These people are breaking the law. I would suggest the Government that they should come out with other proposals to safeguard these students. ಇಲ್ಲವೆಂದರೆ ಏನಾಗುತ್ತದೆ ಎಂದರೆ, ಈಗಾಗಲೇ ಕರ್ನಾಟಕ ಸ್ಟೇಟ್‌ನಲ್ಲಿ 20 ಸಾವಿರಕ್ಕಿಂತ ಹೆಚ್ಚು ಮಕ್ಕಳು ನರ್ಸಿಂಗ್ ಸ್ಕೂಲ್‌ಗಳಲ್ಲಿ ಮತ್ತು ನರ್ಸಿಂಗ್ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಈ ವರ್ಷ ತುಂಬಾ ಕಡಿಮೆ ಬಂದಿದ್ದಾರೆ. ಹೊರಗಡೆಯವರಿಂದ ನರ್ಸಿಂಗ್ ಕಾಲೇಜ್‌ಗಳಲ್ಲಿ ಅಡ್ಮಿಷನ್‌ಗೆ ಬರುತ್ತಿಲ್ಲ. The revenue what the Government is getting, we are losing

that revenue. So, you have to take some stern decision about this to safeguard the students.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು) : ಮಾನ್ಯ ಸಚಿವರ ಕಳಕಳಿಯನ್ನು ನಾನು ಗೌರವಿಸುತ್ತೇನೆ, ಆದರೆ ಇದು ಕೇವಲ ಗಮನ ಸೆಳೆಯುವಂಥ ಸೂಚನೆ; ಗಮನ ಸೆಳೆಯುವ ಸೂಚನೆಯಲ್ಲಿ ಅವರು ಕೇವಲ ಗುಲ್ಬರ್ಗಾ ಕಾಲೇಜಿನಲ್ಲಿ 7 ಜನ ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಅವರನ್ನು ಹೊಡೆದಿದ್ದಾರೆನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಸರ್ಕಾರ ಉತ್ತರ ಕೊಟ್ಟಿದೆ; ಜಿಲ್ಲಾಧಿಕಾರಿಗಳ ಮೂಲಕ ತನಿಖೆ ನಡೆಸಿ, ಒಂದು ವಾರದೊಳಗೆ ತಮಗೆ ಉತ್ತರ ಕೊಡುತ್ತೇವೆಂದು ಹೇಳಿದ್ದೇವೆ. ಇದರ ಜೊತೆಗೆ ಅವರು ಬೇರೆ ಬೇರೆ ವಿಷಯಗಳನ್ನು ಎತ್ತಿದ್ದಾರೆ, ಆ ವಿಷಯಗಳ ಬಗ್ಗೆ ಸರ್ಕಾರದ ಜೊತೆಗಾಗಲಿ ಅಥವಾ ಸಂಬಂಧಿಸಿದ ಮಂತ್ರಿಗಳ ಜೊತೆಗಾಗಲಿ ತಾವು ಕೂತು ಮಾತನಾಡಿದರೆ ಖಂಡಿತವಾಗಿಯೂ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ; The scope of discussion in the calling attention motion is absolutely very very limited to the extent of the matter that we have raised, we are seized of this matter. The concerned Minister has already informed the Deputy Commissioner, Gulbarga to make an enquiry into the facts and to submit a report within one week. Within one week, the Hon'ble Minister will come back and narrate to you about everything that has happened, and if somebody has committed a cognisable one, we will certainly register a case against them. ಆದುದರಿಂದ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಇಷ್ಟನ್ನು ಮಾತ್ರ ನಾನು ಭರವಸೆ ಕೊಡುತ್ತೇನೆ.

ಶ್ರೀ ಎನ್.ಎಲ್. ನರೇಂದ್ರ ಬಾಬು: ಮಾನ್ಯ ಸಚಿವರಲ್ಲಿ ಒಂದಂಶವನ್ನು ಮನವಿ ಮಾಡಲು ಬಯಸುವುದೇನೆಂದರೆ, ಈ ರೀತಿಯಾದ ಬಹಳಷ್ಟು ದೂರನ್ನು ಬೆಂಗಳೂರು ನಗರದಲ್ಲೂ ಕೂಡ ಬಹಳಷ್ಟು ಜನಪ್ರತಿನಿಧಿಗಳು ಪಡೆಯುತ್ತೇವೆ, ಕಾರಣವೇನೆಂದರೆ, ಅವರು ಹೇಳಿದಂತೆ, 60ಕ್ಕೆ ಅನುಮತಿ ಕೊಟ್ಟಿರುತ್ತಾರೆ ನಂತರ 40ಕ್ಕೆ ಆಲ್ ಇಂಡಿಯಾ ಲೆವೆಲ್ ಅನುಮತಿ ಸಿಕ್ಕ ಕೂಡಲೇ ಅವರು 20 ಜನರನ್ನು ಡಿಲೀಟ್ ಮಾಡಲೇ ಬೇಕಾಗುತ್ತದೆ. ಆ ವಿದ್ಯಾರ್ಥಿಗಳಿಗೆ ಏನು ಮಾಡುತ್ತಾರೆಂದರೆ, ಅಟೆಂಡೆನ್ಸ್ ಶಾರ್ಟೇಜ್ ಮತ್ತೊಂದು ಮಗದೊಂದು ಹಲವಾರು ಕಾರಣಗಳನ್ನು ಇಟ್ಟು, ಅವರನ್ನು ಟಾರ್ಚರ್

ಮಾಡುವುದಕ್ಕೆ ಶುರು ಮಾಡುತ್ತಾರೆ. ಬಹುಶಃ ಯಾವುದೇ ರಾಜ್ಯದ ವಿದ್ಯಾರ್ಥಿಗಳಾಗಲಿ ಕರ್ನಾಟಕಕ್ಕೆ ಜ್ಞಾನಾರ್ಜನೆಗೆ, ವಿದ್ಯಾರ್ಥಿರ್ಜನೆಗೆ ಬರುವ ವಿದ್ಯಾರ್ಥಿಗಳಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು. ಈ ರೀತಿಯಾಗಿ ಶೋಷಣೆ ಮಾಡುವುದನ್ನು ನಿಲ್ಲಿಸುವುದಕ್ಕೆ ರಾಜ್ಯಮಟ್ಟದಲ್ಲಿ ಏನೊಂದು ಟಾಸ್ಕ್‌ಫೋರ್ಸ್ ಇದೆ, ಅದು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಿ, ಇಂತಹದ್ದಕ್ಕೆ ಕಡಿವಾಣ ಹಾಕದಿದ್ದರೆ ಬಹಳ ಕಷ್ಟವಾಗುತ್ತದೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ, ಇಲ್ಲವೆಂದರೆ ರಾಜ್ಯದ ಮೇಲೆ ಹಾಗೂ ವಿದ್ಯಾರ್ಥಿಗಳ ಮೇಲೆ ದೊಡ್ಡ ಕೆಟ್ಟ ಛಾಯೆ ಮೂಡುತ್ತದೆ. ದಯವಿಟ್ಟು ಇದಕ್ಕೆ ಕಡಿವಾಣ ಹಾಕಬೇಕೆಂದು ತಮ್ಮ ಮುಖೇನ ಆಗ್ರಹಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಉಪಯುಕ್ತವಾದ ಸಲಹೆಯನ್ನು ಇಬ್ಬರೂ ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಅದರ ಸಾಧಕಬಾಧಕಗಳು, ತಮ್ಮಗೂ ಕೂಡ ಗೊತ್ತಿದೆ. ಕೇರಳ ರಾಜ್ಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಎಷ್ಟು ದೊಡ್ಡ ಪ್ರಮಾಣದಲ್ಲಿ ಬರುತ್ತಿದ್ದಾರೆಂಬುದು ತಮಗೂ ಕೂಡ ಗೊತ್ತಿದೆ, ಇವೆಲ್ಲಾ ನಾಯಿ ಕೊಡೆಯಂತೆ ಎದ್ದಿರುವುದೂ ಕೂಡ ತಮಗೆ ಗೊತ್ತಿದೆ. ಈ ಹಿನ್ನೆಲೆಯಲ್ಲಿ ನಾವೇನು ಟಾಸ್‌ಫೋರ್ಸ್ ಮಾಡಿದ್ದೇವೆ, ಅದರ ಮೂಲಕ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

(ಈ) ವಿಷಯ: ಪಾವಗಡ ತಾಲ್ಲೂಕಿನಲ್ಲಿ ಕಳಪೆ ಗುಣಮಟ್ಟದ ಬಿತ್ತನೆಬೀಜ ಸರಬರಾಜು ಮಾಡಿರುವ ಬಗ್ಗೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನಲ್ಲಿ ಕಳಪೆ ಬಿತ್ತನೆ ಬೀಜದ ಬಗ್ಗೆ ಅಲ್ಲಿನ ರೈತರು ಆತಂಕಕ್ಕೆ ಒಳಗಾಗಿದ್ದು, ಈಗಾಗಲೇ ಮಾರಾಟ ಕೇಂದ್ರಗಳಲ್ಲಿ ಬೀಜ ವಿತರಣೆ ಮಾಡದೆ ಸರ್ಕಾರದ ಅಧಿಕಾರಿಗಳು ವಾರಕ್ಕೆ ಎರಡು ಸಾರಿ ಮಾತ್ರ ಕೊಡುತ್ತೇವೆಂದು ತೀರ್ಮಾನ ತೆಗೆದುಕೊಂಡಿದ್ದಾರೆ ಈ ಸಂಬಂಧವಾಗಿ ತಾವು ಅಲ್ಲಿನ ರೈತರಿಗಾಗುವ ಸಮಸ್ಯೆಯನ್ನು ಕೂಡಲೇ ನಿವಾರಣೆ ಮಾಡುವುದಕ್ಕೋಸ್ಕರ ಅಲ್ಲಿನ ಎಲ್ಲಾ ಮಾರಾಟ ಕೇಂದ್ರಗಳಲ್ಲೂ ಸಹ ಅತಿ ಜರೂರಾಗಿ ಪ್ರತಿನಿತ್ಯವೂ ಸಹ ಬಿತ್ತನೆ ಬೀಜವನ್ನು ಸರಬರಾಜು ಮಾಡಬೇಕು, ಕಳಪೆ ಗುಣಮಟ್ಟದ ಬಿತ್ತನೆ ಬೀಜವನ್ನು ಈಗಾಗಲೇ ರೈತರು ಪತ್ತೆಹಚ್ಚಿ ಆ ಗೋಡೌನ್‌ಗಳಿಗೆ ಬೀಗವನ್ನು ಹಾಕಿಸಿ, ಆ ಹಿನ್ನೆಲೆಯಲ್ಲಿ ಅಧಿಕಾರಿಗಳು ಈಗಾಗಲೇ ತುರ್ತು ಕ್ರಮವನ್ನು ತೆಗೆದುಕೊಳ್ಳದೆ ವಾರಕ್ಕೆ ಎರಡು ಬಾರಿ ಮಾತ್ರ ಬೀಜವನ್ನು ವಿತರಣೆ ಮಾಡುತ್ತೇವೆಂದು ಆದೇಶವನ್ನು ನೀಡಿದ್ದಾರೆ. ಬಿತ್ತನೆ ಸಮಯ